

بسم اللہ الرّحمٰن الرّحیم

# ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸರ್ವ ಶ್ರೇಷ್ಠ ಪ್ರವಾದಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **18-12-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಾನು ವಾಗ್ದತ್ತ ಮಹ್‌ದೀ ಮತ್ತು ಮಸೀಹ್ ಆಗಿರುವೆನೆಂಬ ವಾದ ಮಾಡಿದ ಮೊದಲುಗೊಂಡು ಇಂದಿನ ತನಕ ಅಹ್ಮದಿಯ್ಯತ್‌ನ ವಿರೋಧಿಗಳು ಮತ್ತು ಮತಪಂಡಿತರೆಂದು ಹೇಳಿಕೊಳ್ಳುವವರು ಅವರ ವಿರುದ್ಧ ಅನೇಕ ಆಕ್ಷೇಪಗಳನ್ನು ಮಾಡುತ್ತಾ ಬಂದಿದ್ದಾರೆ. ಇವರು ಮಾಡುವ ಅತ್ಯಂತ ದೊಡ್ಡ ಆಕ್ಷೇಪವೇನೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ದೊಡ್ಡ ಸ್ಥಾನ ಪಡೆದವರೆಂದು ಭಾವಿಸುತ್ತಿದ್ದರು ಎಂಬುದಾಗಿದೆ. (ನಊಧುಬಿಲ್ಲಾಹ್). ಇವರು ಹೇಳುವುದೇನೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಎಂತಹ ಶಬ್ದ ಬಳಸಿದ್ದಾರೆಂದರೆ ಅವುಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಪಮಾನಕರವಾಗಿವೆ. ಇದೇ ಆರೋಪವನ್ನು ಈ ಜನರು ಇಂದು ಅಹ್ಮದಿಯರ ವಿರುದ್ಧ ಸಹ ಮಾಡುತ್ತಾರೆ. ಆದರೆ ಸಾತ್ವಿಕರಾದ ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಓದಿದಾಗ ಅವರು ಹೇಳಿದ ಮಾತುಗಳನ್ನು ತಿಳಿದಾಗ ಮತ್ತು ಜಮಾಅತಿನ ಸಾಹಿತ್ಯಗಳನ್ನು ಓದಿದಾಗ ಅವರಿಗೆ ತಕ್ಷಣ ತಿಳಿಯುತ್ತದೆ ಈ ಮುಸ್ಲಿಮ್ ಪಂಡಿತರೆಂದು ಹೇಳಿಕೊಳ್ಳುವವರು ಕೇವಲ ಕಲಹ ಸೃಷ್ಟಿಸುವ ಸಲುವಾಗಿ ಹೀಗೆಲ್ಲಾ ಆರೋಪಗಳನ್ನು ಮಾಡುತ್ತಾರೆಂದು. ಈಗ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿವಿಧ ಗ್ರಂಥಗಳಿಂದ ಆಯ್ದ ಕೆಲವು ಉಲ್ಲೇಖಗಳನ್ನು ನೀಡುವೆನು. ಬರಾಹೀನೆ ಅಹ್ಮದಿಯಾ ಮೊದಲುಗೊಂಡು ತನ್ನ ಮರಣಕ್ಕೆ ಸ್ವಲ್ಪ ಮೊದಲು ಬರೆದ ಗ್ರಂಥದಿಂದಲೂ ನಾನು ಉಲ್ಲೇಖಗಳನ್ನು ನಿಮ್ಮ ಮುಂದಿರಿಸುವೆನು. ಅವುಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉನ್ನತ ಸ್ಥಾನವನ್ನು ವಿವರಿಸಿರುವರು.

ಬರಾಹೀನೆ ಅಹ್ಮದಿಯಾದಲ್ಲಿ ಒಂದೆಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಈಗ ಆಕಾಶದ ಕೆಳಗೆ ಒಬ್ಬನೇ ನಬಿ ಮತ್ತು ಒಂದೇ ಗ್ರಂಥವಿದೆ. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಗಿರುವರು. ಅವರು ಎಲ್ಲಾ ಪ್ರವಾದಿಗಳಿಗಿಂತ ಉನ್ನತ ಸ್ಥಾನದಲ್ಲಿರುವವರೂ ಎಲ್ಲರಿಗಿಂತಲೂ ಶ್ರೇಷ್ಠರೂ ಆಗಿರುವರು. ಅವರು ಎಲ್ಲ ಸಂದೇಶವಾಹಕರಿಗಿಂತ ಪರಿಪೂರ್ಣರೂ ಆಗಿರುವರು. ಅವರು ಖಾತಮುಲ್ ಅಂಬಿಯಾ ಮತ್ತು ಖೈರುನ್ನಾಸ್ (ಮನುಷ್ಯರಲ್ಲಿ ಶ್ರೇಷ್ಠರು) ಆಗಿದ್ದಾರೆ. ಅವರನ್ನು ಅನುಸರಿಸುವುದರಿಂದ ಅಲ್ಲಾಹನು ಸಿಗುತ್ತಾನೆ. ಎಲ್ಲ ಅಂಧಕಾರಗಳ ಪರದೆಗಳು ಎತ್ತಲ್ಪಡುತ್ತವೆ. ಈ ಲೋಕದಲ್ಲಿಯೇ ಸತ್ಯವಾದ ಮೋಕ್ಷದ ಚಿಹ್ನೆಗಳು ಕಾಣಿಸಲು ತೊಡಗುತ್ತವೆ. ಅದೇ ರೀತಿ ಪವಿತ್ರ ಖುರ್‌ಆನ್ ಸತ್ಯವಾದ, ಪರಿಪೂರ್ಣವಾದ ಮಾರ್ಗದರ್ಶನಗಳಿಂದ ಮತ್ತು ಪ್ರಭಾವಗಳಿಂದ ತುಂಬಿದೆ. ಅವುಗಳ ಮೂಲಕ ದೇವಜ್ಞಾನಗಳಿಸಬಹುದಾಗಿದೆ. ಮನುಷ್ಯ ಸಹಜ ಕೊಳಕುಗಳಿಂದ ಹೃದಯ ಪರಿಶುದ್ಧವಾಗುತ್ತದೆ. ಮನುಷ್ಯನು ಮೌಢ್ಯ, ನಿರ್ಲಕ್ಷತೆ, ಸಂಶಯಗಳ ಪರದೆಗಳಿಂದ ಮುಕ್ತನಾಗುತ್ತಾನೆ ಹಾಗೂ ಪರಿಪೂರ್ಣ ಜ್ಞಾನವನ್ನು ಗಳಿಸುತ್ತಾನೆ. ಈ ವಿನೀತನು ಸಹ ಆ ವೈಭವಶಾಲಿ ನಬಿಯ ವಿನೀತ ಸೇವಕರಲ್ಲೊಬ್ಬನಾಗಿದ್ದಾನೆ. ಆ ಪ್ರವಾದಿ, ಸಂದೇಶವಾಹಕರ ನಾಯಕನೂ ಸಂದೇಶವಾಹಕರ ನೇತಾರನೂ ಆಗಿದ್ದಾರೆ.

1886ರಲ್ಲಿ ಬರೆದ **'ಸುರ್ಮ ಚಶ್ಮ ಆರ್ಯಾ'** ಎಂಬ ಗ್ರಂಥದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಬರೆದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪರಿಶುದ್ಧ ಅಂತರಂಗ, ಹೃದಯ ವಿಶಾಲತೆ, ಚಾರಿತ್ರ್ಯ ಮತ್ತು ಲಜ್ಜೆ, ಸತ್ಯ ಸಂಧತೆ ಮತ್ತು ನಿಷ್ಠೆ, ದೇವನ ಬಗ್ಗೆ ಭರವಸೆ ಮತ್ತು ದೇವ ಪ್ರೇಮ ಇವುಗಳಲ್ಲಿ ಎಲ್ಲಾ ಪ್ರವಾದಿಗಳಿಗಿಂತ ಉನ್ನತ ಸ್ಥಾನದಲ್ಲಿದ್ದರು. ಅವರು ಎಲ್ಲರಿಗಿಂತಲೂ ಶ್ರೇಷ್ಠರೂ ಎಲ್ಲರಿಗಿಂತ ಪರಿಪೂರ್ಣರೂ ಎಲ್ಲರಿಗಿಂತಲೂ ಪರಿಶುದ್ಧರೂ ಆಗಿದ್ದರು. ಆದುದರಿಂದ ಅಲ್ಲಾಹನು ಅವರನ್ನು ಪರಿಪೂರ್ಣತೆ ಎಂಬ ಪರಿಮಳ ದ್ರವ್ಯದಿಂದ ಸವರಿದನು. ಅವರ ಹೃದಯ ಇತರ ಎಲ್ಲಾ ಮೊದಲಿನ ಕಾಲದ ಮತ್ತು ಅನಂತರ ಕಾಲದ ಜನರ ಹೃದಯಗಳಿಗಿಂತ ವಿಶಾಲವಾದುದೂ ಪರಿಶುದ್ಧವೂ ನಿಷ್ಕಳಂಕವೂ ಪ್ರಕಾಶಮಾನವಾದುದೂ ಆಗಿತ್ತು. ಇದೇ ಕಾರಣದಿಂದ ಅವರಿಗೆ ಎಂತಹ ಸಂದೇಶವಾಣಿ ಅವತೀರ್ಣಗೊಂಡಿತೆಂದರೆ ಇತರ ಎಲ್ಲರಿಗೂ ದೊರೆತ ಮತ್ತು ದೊರೆಯಬಹುದಾದ ಸಂದೇಶವಾಣಿಗಳಿಗಿಂತ ಬಲಶಾಲಿಯೂ ಪರಿಪೂರ್ಣವೂ ಉನ್ನತವೂ ಆಗಿದ್ದು ಅದು ಅಲ್ಲಾಹನ ಗುಣವಿಶೇಷಗಳನ್ನು ತೋರಿಸಿಕೊಡಲು ಅತ್ಯಂತ ಸ್ವಚ್ಛವೂ ವಿಶಾಲವೂ ಆಗಿರುವ ಕನ್ನಡಿಯಾಗಿದೆ.

1891ರಲ್ಲಿ **ತೌಝೀಹೆ ಮರಾಮ್** ಎಂಬ ಗ್ರಂಥದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಬರೆದಿದ್ದಾರೆ: (ದೇವ ಸಂದೇಶವಾಣಿಯು) ಈ ಸ್ಥಿತಿ ಲೋಕದಲ್ಲಿ ಒಬ್ಬ ಮನುಷ್ಯನಿಗೆ ಮಾತ್ರ ಲಭಿಸಿತು. ಅವರು ಪರಿಪೂರ್ಣ ಮನುಷ್ಯರಾಗಿದ್ದರು. ಮಾನವೀಯತೆಯ ಎಲ್ಲವೂ ಅವರಲ್ಲಿ ಪೂರ್ಣವಾಗಿ ಅಡಕವಾಗಿದ್ದುವು. ಮನುಷ್ಯರಿಗೆ ದೊರಕಬಹುದಾದ ಎಲ್ಲ ಶಕ್ತಿಗಳು ಅವರಿಗೆ ದೊರಕಿದ್ದುವು. ಅಲ್ಲಾಹನು ಮಾಡಿದ ಮನುಷ್ಯ ಸೃಷ್ಟಿಯ ಅತ್ಯಂತ ಉನ್ನತವಾದ ಸ್ಥಾನವನ್ನು ಗುರುತಿಸುವ ಒಂದು ಗೆರೆ ಎಳೆದರೆ ಅದರ ಕೊನೆಯ ತನಕ ತಲಪಿದವರು ಅವರೇ ಆಗಿದ್ದರು. ಅವರು ಅತ್ಯಂತ ಉನ್ನತ ಸ್ಥಾನವನ್ನು ಏರಿದವರಾಗಿದ್ದಾರೆ. ಅಲ್ಲಾಹನು ಅತ್ಯಂತ ಚಿಕ್ಕ ಮಟ್ಟದಿಂದ ಸೃಷ್ಟಿಯನ್ನು ಆರಂಭಿಸಿ ಅತ್ಯಂತ ಉನ್ನತ ಮಟ್ಟಕ್ಕೆ ಸೃಷ್ಟಿಕಾರ್ಯವನ್ನು ತಲಪಿಸಿದನು. ಆ ಉನ್ನತ ಮಟ್ಟವೇ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಗಿರುವರು. ಮುಹಮ್ಮದ್ ಎಂಬ ಶಬ್ದದ ಅರ್ಥ ಅತ್ಯಂತ ಹೆಚ್ಚು ಸ್ತುತಿಸಲ್ಪಟ್ಟವನೆಂದು. ಅವರು ಎಷ್ಟು ಉನ್ನತ ಮಟ್ಟದವರಾಗಿದ್ದಾರೆಂದರೆ ಅವರಿಗೆ ಲಭಿಸಿದ ಸಂದೇಶವಾಣಿ ಸಹ ಉನ್ನತ ಮಟ್ಟದ್ದಾಗಿತ್ತು. ಅವರಿಗೆ ಎಂತಹ ಸ್ಥಾನ ಲಭಿಸಿತೆಂದರೆ ನಾನು (ಎಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್) ಮತ್ತು ಮಸೀಹ್ (ಈಸಾ ಅಲೈಹಿಸ್ಸಲಾಮ್) ಆ ಸ್ಥಾನವನ್ನು ತಲಪಲು ಸಾಧ್ಯವಿಲ್ಲ.

1892-93ರಲ್ಲಿ ರಚಿಸಿದ **'ಆಯಿನ ಕಮಾಲಾತೆ ಇಸ್ಲಾಮ್'**ನಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಬರೆದಿದ್ದಾರೆ:

ಪರಿಪೂರ್ಣ ಮನುಷ್ಯನಾಗಿದ್ದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ನೀಡಲಾದ ಉನ್ನತ ಮಟ್ಟದ ಪ್ರಕಾಶ, ಅದು ದೇವದೂತರಲ್ಲಿರಲಿಲ್ಲ. ನಕ್ಷತ್ರಗಳಲ್ಲೂ ಇರಲಿಲ್ಲ. ಚಂದ್ರನಲ್ಲೂ ಇರಲಿಲ್ಲ. ಸೂರ್ಯನಲ್ಲಿ ಸಹ ಇರಲಿಲ್ಲ. ಭೂಮಿಯ ಸಮುದ್ರಗಳಲ್ಲೂ ನದಿಗಳಲ್ಲೂ ಇರಲಿಲ್ಲ. ಅದು ಮಾಣಿಕ್ಯ, ಯಾಖೂತ್, ಝುಮ್‌ರದ್, ಅಲ್‌ಮಾಸ್ ಮೊದಲಾದ ರತ್ನಗಳಲ್ಲೂ ಮುತ್ತಿನಲ್ಲೂ ಇರಲಿಲ್ಲ. ಎಂದರೆ ಭೂಮಿ ಮತ್ತು ಆಕಾಶದ ಯಾವ ವಸ್ತುವಿನಲ್ಲೂ ಇರಲಿಲ್ಲ. ಅದು ಇದ್ದುದು ಪರಿಪೂರ್ಣ ಮನುಷ್ಯನಾಗಿದ್ದ ನಮ್ಮ ಯಜಮಾನರಾದ ಪ್ರವಾದಿಗಳ ನಾಯಕರಾದ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಮಾತ್ರವಾಗಿತ್ತು.

1894ರಲ್ಲಿ **'ಇತ್‌ಮಾಮುಲ್ ಹುಜ್ಜ'** ಎಂಬ ಗ್ರಂಥದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಬರೆದಿದ್ದಾರೆ: ಅವರು ಅತ್ಯಂತ ಪರಿಪೂರ್ಣ ಮನುಷ್ಯರಾಗಿದ್ದರು. ಅವರು ಪರಿಪೂರ್ಣ ನಬಿಯಾಗಿದ್ದರು. ಅವರು ಪರಿಪೂರ್ಣ ಅನುಗ್ರಹಗಳೊಂದಿಗೆ ಆಗಮಿಸಿದರು. ಅವರ ಆಧ್ಯಾತ್ಮಿಕ ಆಗಮನ ಮತ್ತು ಪುನರುತ್ಥಾನದ ಕಾರಣ ಲೋಕದಲ್ಲಿ ಪ್ರಥಮ ಖಿಯಾಮತ್ ಸಂಭವಿಸಿತು. ಅವರ ಆಗಮನದಿಂದ ಸಂಪೂರ್ಣ ಮೃತವಾಗಿದ್ದ ಒಂದು ಲೋಕವು ಪುನಃ ಜೀವಂತವಾಯಿತು. ಆ ಅನುಗ್ರಹದಾಯಕ ಪ್ರವಾದಿ ಹಝ್ರತ್ ಖಾತಮುಲ್ ಅಂಬಿಯಾ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರಾಗಿದ್ದಾರೆ. ಓ ಪ್ರಿಯ ಅಲ್ಲಾಹನೇ ನೀನು ಲೋಕದ ಆರಂಭದಿಂದ ಯಾರಿಗೂ ನೀಡಿರದಂತಹ ಅನುಗ್ರಹ ಈ ಪ್ರವಾದಿಗೆ ದಯಪಾಲಿಸು.

1895ರಲ್ಲಿ **'ಆರ್ಯಾ ಧರ್ಮ್'** ಎಂಬ ಪುಸ್ತಕದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಬರೆದಿದ್ದಾರೆ: ನಾವು ನಮ್ಮ ಪೂರ್ಣ ಪರಿಶೋಧನೆ ಮೂಲಕ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಎಲ್ಲ ನಿಷ್ಕಳಂಕರ ನೇತಾರನಾಗಿ ಎಲ್ಲ ಪರಿಶುದ್ಧರ ನಾಯಕನಾಗಿ ಕಂಡಿದ್ದೇವೆ. ಅವರು ಖಾತಮುಲ್ ಅಂಬಿಯಾ ಆಗಿದ್ದಾರೆ. ಎಲ್ಲ ಪ್ರವಾದಿತ್ವಗಳು ಮತ್ತು ಎಲ್ಲ ಪಾವಿತ್ರ್ಯಗಳು ಎಲ್ಲ ಪರಿಪೂರ್ಣತೆಗಳು ಅವರಲ್ಲಿ ಸಮಾವೇಶಗೊಂಡಿವೆ ಮತ್ತು ಪೂರ್ಣಗೊಂಡಿವೆ.

1897ರಲ್ಲಿ ರಚಿಸಿದ **'ಸಿರಾಜೆ ಮುನೀರ್'** ಎಂಬ ಗ್ರಂಥದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದೆಡೆ ಹೀಗೆ ಬರೆದಿದ್ದಾರೆ: ನಾವು ನ್ಯಾಯದ ದೃಷ್ಟಿಯಲ್ಲಿ ನೋಡುವುದಾದರೆ ಎಲ್ಲ ಪ್ರವಾದಿಗಳಿಗಿಂತ ಶೂರನಾದ ಪ್ರವಾದಿ, ಜೀವಂತ ಪ್ರವಾದಿ, ಅಲ್ಲಾಹನಿಗೆ ಅತ್ಯಂತ ಪ್ರಿಯ ಪ್ರವಾದಿ, ಕೇವಲ ನಮ್ಮ ಪ್ರವಾದಿವರ್ಯರಾದ, ಸಂದೇಸವಾಹಕರ ನಾಯಕ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಾತ್ರವಾಗಿದ್ದರೆಂದು ಸ್ಪಷ್ಟವಾಗುತ್ತದೆ. ಅವರ ನೆರಳಿನಲ್ಲಿ ಹತ್ತು ದಿನ ಚಲಿಸಿದರೆ ಎಂತಹ ಪ್ರಕಾಶ ದೊರಕುವುದೆಂದರೆ, ಮೊದಲು ಸಾವಿರ ವರ್ಷಗಳಲ್ಲಿ ಸಹ ಅಂತಹ ಪ್ರಕಾಶ ಲಭಿಸಲು ಸಾಧ್ಯವಿರಲಿಲ್ಲ.

1898ರಲ್ಲಿ **'ಕಿತಾಬುಲ್ ಬರಿಯ್ಯ'**ದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಬರೆದಿದ್ದಾರೆ: ನಮ್ಮ ಪ್ರವಾದಿಯ ಅದ್ಭುತ ಕೃತ್ಯಗಳು ಮತ್ತು ದೃಷ್ಟಾಂತಗಳು ಎರಡು ವಿಧಗಳಲ್ಲಿವೆ: ಒಂದನೆಯದು, ಅವರ ಕೈಗಳಿಂದ, ಅವರ ಮಾತಿನಿಂದ, ಅವರ ಕೃತ್ಯದಿಂದ, ಅಥವಾ ಅವರ ಪ್ರಾರ್ಥನೆ ಮೂಲಕ ಪ್ರಕಟವಾದುದು. ಇವುಗಳು ಅಂದಾಜು ಮೂರು ಸಾವಿರಗಳಷ್ಟಿವೆ. ಎರಡನೆಯದು, ಅವರ ಅನುಯಾಯಿಗಳ ಮೂಲಕ ಪ್ರಕಟವಾಗುತ್ತಿರುವ ದೃಷ್ಟಾಂತಗಳು. ಅವುಗಳ ಸಂಖ್ಯೆ ಲಕ್ಷಗಳನ್ನು ತಲಪಿವೆ. ಅಂತಹ ದೃಷ್ಟಾಂತಗಳು ಪ್ರಕಟಗೊಳ್ಳದ ಯಾವ ಶತಮಾನವೂ ದಾಟಿ ಹೋಗಿಲ್ಲ. ಈ ಕಾಲಘಟ್ಟದಲ್ಲಿ ಈ ವಿನೀತನ ಮೂಲಕ ಅಲ್ಲಾಹನು ಇಂತಹ ದೃಷ್ಟಾಂತಗಳನ್ನು ಪ್ರಕಟಗೊಳಿಸುತ್ತಿರುವನು. ಈ ದೃಷ್ಟಾಂತಗಳ ಶೃಂಖಲೆ ಎಂದೂ ಕೊನೆಗೊಳ್ಳಲಾರದು. ನಿಶ್ಚಯವಾಗಿಯೂ ಅಲ್ಲಾಹನ ಬಳಿ ಎಲ್ಲರಿಗಿಂತಲೂ ದೊಡ್ಡ ಪ್ರವಾದಿ ಮತ್ತು ಅತ್ಯಂತ ಪ್ರಿಯ ಪ್ರವಾದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಗಿದ್ದಾರೆ. ಏಕೆಂದರೆ ಇತರ ಪ್ರವಾದಿಗಳ ಸಮುದಾಯಗಳು ಅಂಧಕಾರದಲ್ಲಿವೆ. ಅವರ ಬಳಿ ಹಳೆಯ ಕಥೆಗಳು ಮಾತ್ರವಿದೆ. ಆದರೆ ಮುಸ್ಲಿಮ್ ಸಮುದಾಯ ಯಾವಾಗಲೂ ಅಲ್ಲಾಹನಿಂದ ತಾಜಾ ದೃಷ್ಟಾಂತಗಳನ್ನು ಪಡೆಯುತ್ತಿದೆ. ಈ ದೃಷ್ಟಾಂತಗಳನ್ನು ಪ್ರಕಟಿಸಲು ಅಲ್ಲಾಹನು ಪ್ರತಿಯೊಂದು ಕಾಲದಲ್ಲಿ ಯಾರನ್ನಾದರೂ ಕಳುಹಿಸುತ್ತಾನೆ. ಈ ಕಾಲಘಟ್ಟದಲ್ಲಿ ವಾಗ್ದತ್ತ ಮಸೀಹ್ ಆಗಿ ಅಲ್ಲಾಹನು ನನ್ನನ್ನು ಕಳುಹಿಸಿರುವನು.

1900ರಲ್ಲಿ **'ಅರ್‌ಬಈನ್'** ನಂಬರ್ 1ರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನಾನು ಸತ್ಯವಾಗಿ ಹೇಳುತ್ತೇನೆ– ಲೋಕದಲ್ಲಿ ಒಬ್ಬನೇ ಒಬ್ಬ ಪರಿಪೂರ್ಣ ಮನುಷ್ಯ ಜನಿಸಿದ್ದರು. ಅವರ ಭವಿಷ್ಯವಾಣಿಗಳು ಮತ್ತು ಪ್ರಾರ್ಥನೆಗಳು ಈಡೇರಿರುವ ಮತ್ತು ಇನ್ನಿತರ ಅಸಾಧಾರಣ ಸಂಭವಗಳು ಹೇಗಿವೆ ಎಂದರೆ ಅವರ ಸತ್ಯಸಂಧರಾದ ಅನುಯಾಯಿಗಳ ಮೂಲಕ ಈಗ ಸಹ ಅವು ಸಮುದ್ರಗಳ ಅಲೆಗಳ ಹಾಗೆ ಪ್ರಕಟಗೊಳ್ಳುತ್ತಾ ಇವೆ. ಇಸ್ಲಾಮಿನ ಹೊರತು ಇಂತಹ ಶಕ್ತಿ ಹೊಂದಿದ ಬೇರೆ ಯಾವ ಧರ್ಮವಿದೆ. ಇಸ್ಲಾಮಿನ ಈ ಅನುಗ್ರಹಗಳನ್ನು ಮತ್ತು ದೃಷ್ಟಾಂತಗಳನ್ನು ಎದುರಿಸಬಲ್ಲವರು ಎಲ್ಲಿದ್ದಾರೆ. ಯಾರಿದ್ದಾರೆ?

1902ರಲ್ಲಿ **'ಕಿಶ್ತಿನೂಹ್'** ಎಂಬ ಗ್ರಂಥದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಬರೆದರು: ಈಗ ಭೂಮಿಯಲ್ಲಿ ಮನುಷ್ಯರಿಗೆ ಪವಿತ್ರ ಖುರ್‌ಆನ್ ಹೊರತು ಬೇರೆ ಗ್ರಂಥವಿಲ್ಲ. ಎಲ್ಲ ಮನುಷ್ಯರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೊರತು ಬೇರೆ ಸಂದೇಶವಾಹಕನಾಗಲೀ ಶಿಫಾರಸುಗಾರನಾಗಲೀ ಇಲ್ಲ. ಆದುದರಿಂದ ನೀವು ಸತ್ಯವಾದ ಪ್ರೇಮ ಮತ್ತು ಆದರವನ್ನು ಈ ವೈಭವಶಾಲಿ ಪ್ರವಾದಿಯೊಂದಿಗೆ ಹೊಂದಿರಿ. ಇತರ ಯಾರಿಗೂ ಅವರ ಮೇಲೆ ಶ್ರೇಷ್ಠತೆ ಕಲ್ಪಿಸಬೇಡಿರಿ. ಆಗ ನೀವು ಆಕಾಶದಲ್ಲಿ ಮೋಕ್ಷಗಳಿಸಿದವರೆಂದು ಬರೆಯಲ್ಪಡುವಿರಿ.

1902ರಲ್ಲಿಯೇ ಇನ್ನೊಂದು ಗ್ರಂಥವಾದ **'ನಸೀಮ್ ದಅ್‌ವತ್'**ನಲ್ಲಿ ಹೀಗೆ ಬರೆದರು: ಆ ಸರ್ವಶಕ್ತನಾದ, ಸತ್ಯ ದೇವನಿಗೆ ನಮ್ಮ ಆತ್ಮ ಮತ್ತು ನಮ್ಮ ಕಣ ಕಣಗಳು ಸಾಷ್ಟಾಂಗ ಪ್ರಣಾಮ ಮಾಡುತ್ತಿವೆ. ಅವನಿಂದಲೇ ಎಲ್ಲ ಆತ್ಮಗಳು ಎಲ್ಲ ಸೃಷ್ಟಿಗಳು ಪೂರ್ಣ ಶಕ್ತಿ ಸಾಮರ್ಥ್ಯಗಳೊಂದಿಗೆ ಸೃಷ್ಟಿಸಲ್ಪಟ್ಟವು. ಅವನ ಮೂಲಕವೇ ಎಲ್ಲವೂ ನೆಲೆನಿಂತಿವೆ. ಅವನಿಗೆ ತಿಳಿಯದಿರುವುದು ಯಾವುದೂ ಇಲ್ಲ. ಅವನ ಅಧಿಕಾರಕ್ಕೆ ಮತ್ತು ಅವನ ಸೃಷ್ಟಿಗೆ ಹೊರಗಾಗಿರುವುದು ಯಾವುದೂ ಇಲ್ಲ. ಹಾಗೆಯೇ ಸಾವಿರಾರು ದುರೂದ್ ಮತ್ತು ಅನುಗ್ರಹಗಳು ಅವನ ಪರಿಶುದ್ಧ ಪ್ರವಾದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಅವತೀರ್ಣವಾಗಲಿ. ಅವರ ಮೂಲಕವೇ ನಾವು ಆ ಜೀವಂತನಾದ ದೇವನನ್ನು ಪಡೆದೆವು. ನಮ್ಮ ಸತ್ಯ ದೇವನು ಅಸಂಖ್ಯಾತ ಅನುಗ್ರಹಗಳನ್ನು, ಅಸಂಖ್ಯಾತ ಶಕ್ತಿ ಸಾಮರ್ಥ್ಯಗಳನ್ನು, ಅಸಂಖ್ಯಾತ ಸೌಂದರ್ಯಗಳನ್ನು, ಅಸಂಖ್ಯಾತ ಔದಾರ್ಯಗಳನ್ನು ಹೊಂದಿದವನಾಗಿದ್ದಾನೆ. ಅವನ ಹೊರತು ಅನ್ಯ ದೇವನಿಲ್ಲ. ಈ ದೇವನು ನಮಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೂಲಕ ದೊರಕಿದನು.

1903ರಲ್ಲಿ **'ಲೆಕ್ಚರ್ ಸಿಯಾಲ್‌ಕೋಟ್'**ನಲ್ಲಿ ಅವರು ಹೇಳುತ್ತಾರೆ: ಪುರಾತನ ಧರ್ಮಗಳಲ್ಲಿ ಸಂಭವಿಸಿದ ಬಿಗಡಾಯಿಸುವಿಕೆ ಇಸ್ಲಾಮ್

ಧರ್ಮದ ಆಗಮನಕ್ಕೋಸ್ಕರವಾಗಿತ್ತು. ಇಸ್ಲಾಮ್ ಆಗಮಿಸುವ ಮೊದಲು ಎಲ್ಲ ಧರ್ಮಗಳು ಭ್ರಷ್ಟಗೊಂಡಿದ್ದುವು ಎಂದು ಬುದ್ಧಿಶಾಲಿಗಳು ಅಂಗೀಕರಿಸುತ್ತಾರೆ. ಆಧ್ಯಾತ್ಮಿಕತೆ ಅವುಗಳಿಗೆ ನಷ್ಟವಾಗಿದ್ದುವು. ನಮ್ಮ ಪ್ರವಾದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸತ್ಯವನ್ನು ಪ್ರಕಟಿಸಲು ಆಗಮಿಸಿದ **ಮುಜದ್ದಿದ್ ಅಲ್‌ಅ್ಝುಮ್** (ಅತ್ಯುನ್ನತ ಸುಧಾರಕ) ಆಗಿದ್ದರು. ಅವರು ನಷ್ಟವಾಗಿ ಹೋದ ಸತ್ಯವನ್ನು ಭೂಮಿಯಲ್ಲಿ ಪುನಃ ಸ್ಥಾಪಿಸಿದರು. ಈ ಅಭಿಮಾನಕ್ಕೆ ಬೇರೆ ಯಾವ ಪ್ರವಾದಿಯೂ ಅವರೊಂದಿಗೆ ಸಹಭಾಗಿಯಾಗಿ ಇಲ್ಲ. ಅವರು ಸಕಲ ಲೋಕವನ್ನು ಅಂಧಕಾರದಲ್ಲಿ ಕಂಡರು. ಅವರ ಆಗಮನದಿಂದ ಆ ಅಂಧಕಾರವು ಪ್ರಕಾಶವಾಗಿ ಪರಿವರ್ತಿತವಾಯಿತು.

1905ರಲ್ಲಿ **'ಬರಾಹೀನೆ ಅಹ್ಮದಿಯಾ'** ಭಾಗ 5ರಲ್ಲಿ ಅವರು ಬರೆಯುತ್ತಾರೆ: ಇಂತಹ ಧರ್ಮ ನಮಗೆ ನೀಡಿದ ಅಲ್ಲಾಹನಿಗೆ ಸಾವಿರ ಸಾವಿರ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ದೇವಜ್ಞಾನ ಗಳಿಸುವ ಮತ್ತು ಭಯಭಕ್ತಿ ಗಳಿಸುವ ಮಾರ್ಗ ಇದುವೇ ಆಗಿದೆ. ಇಂತಹ ಧರ್ಮ ಯಾರ ಕಾಲದಲ್ಲಿಯೂ ಯಾರಿಗೂ ದೊರಕಿರಲಿಲ್ಲ. ಈ ಪರಿಶುದ್ಧ ಧರ್ಮವನ್ನು ಸೇರಲು ಯಾರ ಮೂಲಕ ನಮಗೆ ಸಾಧ್ಯವಾಯಿತೋ ಆ ನಿಷ್ಕಳಂಕ ಪ್ರವಾದಿಗೆ ಸಾವಿರ ಸಾವಿರ ದುರೂದ್ ಪ್ರಾರ್ಥನೆಗಳನ್ನು ಅರ್ಪಿಸುತ್ತೇವೆ. ಈ ತೋಟಕ್ಕೆ ತಮ್ಮ ರಕ್ತದಿಂದ ನೀರೆರೆದ ಅವರ ಶಿಷ್ಯರಿಗೂ ಸಾವಿರಾರು ಅನುಗ್ರಹಗಳು ಸುರಿಯಲ್ಪಡಲಿ.

1907ರಲ್ಲಿ **'ಹಖೀಖತುಲ್ ವಹೀ'** ಎಂಬ ಪುಸ್ತಕದಲ್ಲಿ ಅವರು ಹೀಗೆ ಬರೆದರು: ನಾನು ಆಶ್ಚರ್ಯ ಚಕಿತನಾಗಿ ನೋಡುತ್ತಿದ್ದೇನೆ. ಈ ಅರಬಿ ಪ್ರವಾದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಎಷ್ಟು ಉನ್ನತ ಮಟ್ಟದ ಪ್ರವಾದಿಯಾಗಿದ್ದಾರೆ. ಅವರಿಗೆ ಸಾವಿರ ಸಾವಿರ ದುರೂದ್ ಅರ್ಪಿಸುತ್ತೇನೆ. ಅವರ ಸ್ಥಾನದ ಉನ್ನತ ಶೃಂಗ ಯಾವುದೆಂದು ತಿಳಿಯದು. ಅವರ ಪವಿತ್ರ ಪ್ರಭಾವವನ್ನು ಅಂದಾಜು ಮಾಡಲು ಮನುಷ್ಯನಿಗೆ ಸಾಧ್ಯವಿಲ್ಲ. ಆದರೆ ಅರ್ಹವಾದ ರೀತಿಯಲ್ಲಿ ಅವರನ್ನು ಗುರುತಿಸಲಾಗಲಿಲ್ಲ ಎನ್ನುವುದು ಖೇದಕರವಾಗಿದೆ. ಲೋಕದಲ್ಲಿ ಕಾಣದಾಗಿದ್ದ ಏಕದೇವ ವಿಶ್ವಾಸವನ್ನು ಆ ಪಹಿಲ್ವಾನರು ಲೋಕಕ್ಕೆ ಮರಳಿ ತಂದರು. ಅವರು ಅಲ್ಲಾಹನನ್ನು ಅತ್ಯಂತವಾಗಿ ಪ್ರೀತಿಸಿದರು. ಮನುಷ್ಯರಿಗೆ ಅತ್ಯಂತ ಹೆಚ್ಚು ಸಹಾನುಭೂತಿ ತೋರಿಸುತ್ತಾ ಜೀವಿಸಿದರು. ಅವರ ಹೃದಯದ ರಹಸ್ಯಗಳನ್ನು ಬಲ್ಲ ಅಲ್ಲಾಹನು ಅವರಿಗೆ ಎಲ್ಲ ಪ್ರವಾದಿಗಳಿಗಿಂತ ಶ್ರೇಷ್ಠತೆ ನೀಡಿದನು. ಅವರ ಆಶೆಗಳನ್ನು ಅವರ ಜೀವಿತದಲ್ಲಿಯೇ ಈಡೇರಿಸಿಕೊಟ್ಟನು. ಅವರೇ ಎಲ್ಲ ಅನುಗ್ರಹಗಳ ಉದ್ಭವ ಸ್ಥಾನವಾಗಿದ್ದಾರೆ. ಅವರ ಮೂಲಕ ಹೊರತು ಯಾರಾದರೂ ತನಗೆ ಅನುಗ್ರಹ ದೊರಕಿದೆ ಎಂದು ವಾದಿಸುವುದಾದರೆ ಅವನು ಮನುಷ್ಯನಲ್ಲ, ಶೈತಾನನ ಸಂತಾನವಾಗಿದ್ದಾನೆ.

1908ರಲ್ಲಿ **'ಚಶ್ಮಯೆ ಮಅರಿಫತ್'**ನಲ್ಲಿ ಹೀಗೆ ಬರೆದರು: ಲೋಕದಲ್ಲಿ ಕೋಟಿಗಟ್ಟಲೆ ಸಾತ್ವಿಕರು ಹಿಂದೆ ಜೀವಿಸಿರಬಹುದು. ಮುಂದೆಯೂ ಜೀವಿಸುವರು. ಆದರೆ ಅವರೆಲ್ಲರಿಗಿಂತ ಉತ್ತಮರಾದವರು ಉನ್ನತರಾದವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಾಗಿದ್ದಾರೆ. **ಇನ್ನಲ್ಲಾಹ ವ ಮಲಾಯಿಕತಹೂ ಯುಸಲ್ಲೂನ ಅಲನ್ನಬಿಯ್ಯಿ ಯಾ ಅಯ್ಯುಹಲ್ಲಧೀನ ಆಮನೂ ಸಲ್ಲೂ ಅಲೈಹಿ ವ ಸಲ್ಲಿಮೂ ತಸ್‌ಲೀಮ.**

ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಿಲ್ಲದ ಜನಾಂಗಗಳಲ್ಲಿ ಆಗಿಹೋದ ಮಹಾತ್ಮರುಗಳ ವಿಷಯ ಬಿಡಿರಿ; ಪವಿತ್ರ ಖುರ್‌ಆನ್ ಪ್ರಸ್ತಾಪಿಸಿದ ಮಹಾತ್ಮರುಗಳಾದ ಹಝ್ರತ್ ಮೂಸಾ, ಹಝ್ರತ್ ದಾವೂದ್, ಹಝ್ರತ್ ಈಸಾ ಅಲೈಹಿಮುಸ್ಸಲಾಮ್ ಮತ್ತು ಇತರ ಪ್ರವಾದಿಗಳಿಗಿಂತ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಶ್ರೇಷ್ಠರಾಗಿದ್ದಾರೆ ಎಂದು ನಾವು ಅಲ್ಲಾಹನ ಆಣೆ ಹಾಕಿ ಹೇಳುತ್ತೇವೆ. ಅವರು ಆಗಮಿಸದೆ ಇರುತ್ತಿದ್ದರೆ ಮತ್ತು ಪವಿತ್ರ ಖುರ್‌ಆನ್ ಅವತೀರ್ಣವಾಗದೆ ಇರುತ್ತಿದ್ದರೆ ಹಾಗೂ ನಾವು ಕಣ್ಣಾರೆ ಕಂಡ ಅನುಗ್ರಹಗಳನ್ನು ಕಾಣದೆ ಇರುತ್ತಿದ್ದರೆ, ಹಿಂದಿನ ಕಾಲದಲ್ಲಿ ಆಗಮಿಸಿದ ಈ ಎಲ್ಲಾ ಪ್ರವಾದಿಗಳ ಸತ್ಯತೆ ನಮಗೆ ಸಂಶಯಕರವಾಗಿಯೇ ತೋರುತ್ತಿತ್ತು.

ಇದೇ **'ಚಶ್ಮಯೆ ಮಅರಿಫತ್'**ನಲ್ಲಿ ಪುನಃ ಹೀಗೆ ಬರೆಯುತ್ತಾರೆ: ಯೋಚಿಸಿ ನೋಡಿರಿ, ಈ ಗೌರವ, ಈ ವೈಭವ, ಈ ಆದರ, ಈ ಪ್ರತಾಪ, ಈ ಸಾವಿರಾರು ದೈವಿಕ ದೃಷ್ಟಾಂತಗಳು, ಸಾವಿರಾರು ಅನುಗ್ರಹಗಳು ಓರ್ವ ಸುಳ್ಳುಗಾರನಿಗೆ ದೊರಕಲು ಸಾಧ್ಯವೇ? ನಾವು ಯಾವ ಪ್ರವಾದಿಯನ್ನು ಅನುಸರಿಸುತ್ತಾ ಇದ್ದೇವೋ ಆ ಪ್ರವಾದಿಯ ಬಗ್ಗೆ ನಮಗೆ ಬಹಳ ಹೆಮ್ಮೆ ಇದೆ. ಅಲ್ಲಾಹನು ಅವರಿಗೆ ಅಪರಿಮಿತ ಅನುಗ್ರಹಗಳನ್ನು ನೀಡಿರುವನು. ಅವರು ದೇವರಂತೂ ಅಲ್ಲ. ಆದರೆ ಅವರ ಮೂಲಕ ನಾವು ದೇವನನ್ನು ಕಂಡೆವು. ಅವರಿಂದ ನಮಗೆ ದೊರಕಿರುವ ಧರ್ಮವು ದೇವನ ಶಕ್ತಿಯನ್ನು ತೋರಿಸುವ ಕನ್ನಡಿಯಾಗಿದೆ. ಇಸ್ಲಾಮ್ ಧರ್ಮವು ಇಲ್ಲದೆ ಇರುತ್ತಿದ್ದರೆ ನಮಗೆ ನುಬುವ್ವತ್ ಎಂದರೇನೆಂದು ತಿಳಿಯಲು ಸಾಧ್ಯವಾಗುತ್ತಿರಲಿಲ್ಲ. ಅದ್ಭುತ ಕೃತ್ಯಗಳು ಸಾಧ್ಯವೇ ಎಂದೂ, ಅವುಗಳು ನೈಸರ್ಗಿಕ ನಿಯಮ ಪ್ರಕಾರ ಸಂಭವಿಸುವವುಗಳೋ ಎಂದೂ ನಮಗೆ ತಿಳಿಯಲು ಸಾಧ್ಯವಾಗುತ್ತಿರಲಿಲ್ಲ. ಈ ಸಮಸ್ಯೆಗಳನ್ನೆಲ್ಲಾ ಈ ಮಹಾನ್ ಪ್ರವಾದಿ ಬಗೆಹರಿಸಿದರು. ಅವರ ಮೂಲಕ ನಾವು ಹೇಗಾದೆವು ಎಂದರೆ ನಾವು ಇತರ ಜನಾಂಗಗಳ ಹಾಗೆ ಕೇವಲ ಕಥೆ ಹೇಳುವವರಲ್ಲ. ಅಲ್ಲಾಹನ ಪ್ರಕಾಶ ಮತ್ತು ಸಹಾಯ ನಮ್ಮ ಜೊತೆಗಿವೆ. ಅನ್ಯರಿಗೆ ಮರೆಯಾಗಿದ್ದ ಆ ದೇವನು, ಅನ್ಯರಿಗೆ ಕಾಣಿಸದ ಆ ರಹಸ್ಯ ಶಕ್ತಿ, ಆ ವೈಭವಶಾಲಿ ದೇವನು ಈ ಅನುಗ್ರಹೀತ ಪ್ರವಾದಿಯ ಮೂಲಕ ನಮಗೆ ಪ್ರಕಟವಾದನು. ಇದಕ್ಕೆಲ್ಲಾ ಕೃತಜ್ಞತೆ ಅರ್ಪಿಸಲು ನಮಗೆ ಹೇಗೆ ತಾನೆ ಸಾಧ್ಯ?

ಒಟ್ಟಿನಲ್ಲಿ, ಈ ರೀತಿಯಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸತ್ಯವಾಗಿ ಅನುಸರಿಸಿದ ಕಾರಣದಿಂದ, ಅವರನ್ನು ಪ್ರೀತಿಸಿದ ಕಾರಣದಿಂದ ಅವರೊಂದಿಗೆ ಅಲ್ಲಾಹನು ಏಕೆ ಮಾತನಾಡಿದನು ಎಂಬುದೇ ಈ ವಿರೋಧಿ ಮತಪಂಡಿತರ ಆಕ್ಷೇಪವಾಗಿದೆ. ಅಲ್ಲಾಹನು ತನ್ನ ಸಾಮೀಪ್ಯವನ್ನು ಅವರಿಗೆ ನೀಡಿದುದು ಏಕೆ?

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹ ಈಗಲೂ ಜಾರಿಯಲ್ಲಿರುವುದಿಲ್ಲ ಎಂದು ಹೇಳುವುದು ಈ ಮುಸ್ಲಿಮ್ ನಾಮಧಾರಿ ಪಂಡಿತರಾಗಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಲೀ ಅಹ್ಮದೀಯರಾಗಲೀ ಅಲ್ಲ. ಈ ಮತಪಂಡಿತರು ಹೇಳುವ ಪ್ರಕಾರ ಅಲ್ಲಾಹನ ಶಕ್ತಿ ಸಾಮರ್ಥ್ಯಗಳು ಮತ್ತು ಗುಣಗಳು ಈಗ ಜಾರಿಯಲ್ಲಿಲ್ಲ, ಅವು ಸೀಮಿತಗೊಂಡಿವೆ (ನಊಧುಬಿಲ್ಲಾಹ್). ಈ ಆರೋಪಗಳನ್ನೆಲ್ಲಾ ಮಾಡುವವರು ಈ ಮತಪಂಡಿತರಾಗಿದ್ದಾರೆ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುವುದೇನೆಂದರೆ ಅಲ್ಲಾಹನ ಶಕ್ತಿ ಸಾಮರ್ಥ್ಯಗಳು ಈಗಲೂ ಕಾರ್ಯ ಪ್ರವೃತ್ತವಾಗಿವೆ ಎಂದು.

**'ಚಶ್ಮೆ ಮಅರಿಫತ್'**ನಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ನಮ್ಮ ಈ ಮಹಾನ್ ಪ್ರವಾದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದಿಂದ ಲೋಕದಲ್ಲಿ ಒಂದು ಬೃಹತ್ ಕ್ರಾಂತಿ ಸಂಭವಿಸಿತು. ವಿಗ್ರಹಾರಾಧನೆ ಹೊರತು ಬೇರೆ ಏನನ್ನೂ ತಿಳಿದಿರದ ಅರಬ್ ದೇಶ ಕೆಲವೇ ದಿನಗಳಲ್ಲಿ ಏಕದೇವ ವಿಶ್ವಾಸ ಎಂಬ ಸಮುದ್ರದಿಂದ ತುಂಬಿತು. ಇನ್ನೊಂದು ಅದ್ಭುತ

ವಿಷಯವೇನೆಂದರೆ ನಮ್ಮ ಪ್ರವಾದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ದೊರಕಿದ ಅದ್ಭುತ ದೃಷ್ಟಾಂತಗಳು ಕೇವಲ ಅವರ ಕಾಲಕ್ಕೆ ಮಾತ್ರ ಸೀಮಿತಗೊಳ್ಳಲಿಲ್ಲ. ಅದರ ಶೃಂಖಲೆ ಖಿಯಾಮತ್ ತನಕ ಜಾರಿಯಲ್ಲಿರುವುದು. ಹಿಂದಿನ ಕಾಲದಲ್ಲಿ ಒಬ್ಬ ಪ್ರವಾದಿ ಆಗಮಿಸಿದರೆ ತಾನು ಹಿಂದೆ ಆಗಮಿಸಿದ ಪ್ರವಾದಿಯ ಅನುಯಾಯಿ ಆದ ಕಾರಣದಿಂದ ತನಗೆ ಅನುಗ್ರಹಗಳು ಲಭಿಸುವುದು ಎಂದು ಹೇಳುತ್ತಿರಲಿಲ್ಲ. ಅವರು ತನ್ನ ಹಿಂದಿನ ಪ್ರವಾದಿ ಸತ್ಯಸಂಧನೆಂದು ಹೇಳಿ ಅವರ ಧರ್ಮಕ್ಕೆ ಸಹಾಯ ಮಾಡುತ್ತಿದ್ದರು. ಆದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಒಂದು ವಿಶಿಷ್ಟ ಅಭಿಮಾನರ್ಹ ವಿಷಯ ನೀಡಲಾಗಿದೆ. ಅದೆಂದರೆ ಅವರು **ಖಾತಮುಲ್ ಅಂಬಿಯಾ** ಆಗಿದ್ದಾರೆ. ಅವರಲ್ಲಿ ನುಬುವ್ವತ್ ಪರಿಪೂರ್ಣಗೊಂಡು, ಮುಕ್ತಾಯವಾಯಿತು. ಅವರ ನಂತರ ಹೊಸ ಶರೀಅತ್ ತರುವ ಪ್ರವಾದಿ ಆಗಮಿಸಲಾರರು. ಅವರ ಉಮ್ಮತ್‌ಗೆ ಸೇರದ ಪ್ರವಾದಿ ಸಹ ಆಗಮಿಸಲಾರರು. ಆದರೆ, ಅವರ ಮೂಲಕ ಮಾತ್ರ ಅಲ್ಲಾಹನ ಸಂದೇಶವಾಣಿ ಲಭಿಸುತ್ತದೆ ಮತ್ತು ಅವರ ಮೂಲಕವಲ್ಲದೆ ಅಲ್ಲಾಹನಿಂದ ಯಾವ ಅನುಗ್ರಹಗಳೂ ದೊರಕಲಾರದು. ಆ ರೀತಿ ಅನುಗ್ರಹ ಲಭಿಸಿದವರು ಅವರ ಉಮ್ಮತೀ ಎಂದು ಕರೆಯಲ್ಪಡುತ್ತಾರೆ ಹೊರತು **ಮುಸ್ತಖಿಲ್ ನಬಿ** (ಸ್ವತಂತ್ರ ನಬಿ) ಎಂದು ಕರೆಯಲ್ಪಡಲಾರರು.

ಒಟ್ಟಿನಲ್ಲಿ, ಈ ಮಾರ್ಗದಲ್ಲಿಯೇ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಲ್ಲಾಹನಿಂದ ಸಂದೇಶ ಪಡೆದು ತನ್ನನ್ನು **ಉಮ್ಮತೀ ನಬಿ** ಎಂದು ಪ್ರಕಟಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಅವರು ಹೀಗೆ ಸಹ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಿತಿ ಹೇಗಿದೆ ಎಂದರೆ ಕನಿಷ್ಟ ಪಕ್ಷ ಇಪ್ಪತ್ತು ಕೋಟಿ ಮುಸ್ಲಿಮರು (ಇದು ಆ ಕಾಲದ ಲೆಕ್ಕವಾಗಿದೆ) ಅವರ ಗುಲಾಮರಾಗಿ ಅಭಿಮಾನ ಹೊಂದುತ್ತಾರೆ. ಲೋಕವನ್ನು ಜಯಿಸಬಲ್ಲ ದೊಡ್ಡ ದೊಡ್ಡ ಚಕ್ರವರ್ತಿಗಳು ಸಹ ಅವರ ಮುಂದೆ ಸಾಮಾನ್ಯ ಗುಲಾಮರ ಹಾಗೆ ವರ್ತಿಸುತ್ತಾರೆ. ಅವರು ಸಾಮಾನ್ಯ ಸೇವಕರ ಹಾಗೆ ಅವರ ಹೆಸರು ಆಲಿಸಿದ ಕೂಡಲೆ ತಮ್ಮ ಸಿಂಹಾಸನದಿಂದ ಇಳಿದು ಬರುತ್ತಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಮಾಡಲಾಗುವ ಇನ್ನೊಂದು ಆಕ್ಷೇಪ, ಅವರು ಇತರ ಮುಸ್ಲಿಮರನ್ನು ಮುಸ್ಲಿಮರೆಂದು ಅಂಗೀಕರಿಸುವುದಿಲ್ಲ ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುವುದು– ಕೇವಲ ಅಹ್ಮದೀಯರು ಮಾತ್ರವಲ್ಲ ಲೋಕದಲ್ಲಿರುವ ಎಲ್ಲ ಮುಸ್ಲಿಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗುಲಾಮರೆಂದು ಕರೆಯಲ್ಪಡಲು ಅಭಿಮಾನ ಹೊಂದಿದ್ದಾರೆ ಎಂದು.

ಆದುದರಿಂದ ಸಂಕ್ಷಿಪ್ತವಾಗಿ ಇದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉನ್ನತ ಸ್ಥಾನದ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮನವರಿಕೆ ಮಾಡಿದ ವಿಚಾರಗಳಾಗಿವೆ. ಅದನ್ನು ಅವರು ಲೋಕಕ್ಕೆ ತಿಳಿಸಿದರು. ತನ್ನನ್ನು ನಂಬುವವರಿಗೂ ಅದರ ಉಪದೇಶ ನೀಡಿದರು. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬದಿರುತ್ತಿದ್ದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಸೌಂದರ್ಯ ಮತ್ತು ಅನುಗ್ರಹ, ಈ ಉನ್ನತ ಸ್ಥಾನಮಾನ ಮತ್ತು ಅನುಗ್ರಹ ಮೊದಲಾದುವು ನಾವು ಅರಿತು ಕೊಳ್ಳುತ್ತಿರಲಿಲ್ಲ.

ವಿರೋಧಿಗಳು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮೊದಲು ಬೇರೆಯೇ ಹೇಳುತ್ತಿದ್ದರು. ಅನಂತರ ತನ್ನ ಅಭಿಪ್ರಾಯ ಬದಲಾಯಿಸಿದರು ಎಂದು. ಅವರು ಸ್ವಾರ್ಥ ಉದ್ದೇಶದಿಂದ ಅಭಿಪ್ರಾಯ ಬದಲಾಯಿಸಿದರು ಎಂದು ಹೇಳುತ್ತಾರೆ.

ನಾನು 1880ರಿಂದ 1908ರ ತನಕದ ಎಂದರೆ ಅವರು ನಿಧನ ಹೊಂದಿದ ವರ್ಷದ ತನಕದ ಉಲ್ಲೇಖಗಳನ್ನು ನೀಡಿದ್ದೇನೆ. ಈ ಉಲ್ಲೇಖಗಳಲ್ಲಿ ಒಂದು ಸ್ಥಳದಲ್ಲಿ ಸಹ ವೈರುದ್ಧ್ಯವಿಲ್ಲ. ಮೊದಲು ವಿವರಿಸಿದುದಕ್ಕಿಂತ ಮಿಗಿಲಾಗಿ ಅವರು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರವರ ಮಹತ್ವವನ್ನು ವಿವರಿಸಿದ್ದಾರೆ. ಅವರು ತಮ್ಮನ್ನು ನಬಿ ಎಂದು ಹೇಳಿದುದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗುಲಾಮನಾಗಿ ಎಂದೇ ಹೇಳಿದ್ದಾರೆ.

ಈ ಸ್ವಾರ್ಥಿ ಮತಪಂಡಿತರ ಹಿಡಿತದಿಂದ ಅಲ್ಲಾಹನು ಮುಸ್ಲಿಮ್ ಸಮುದಾಯವನ್ನು ರಕ್ಷಿಸಲಿ. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಪ್ರೇಮಿಯನ್ನು ನಂಬುವವರನ್ನಾಗಿ ಅಲ್ಲಾಹನು ಮಾಡಲಿ. ಮುಸ್ಲಿಮ್ ಸಮುದಾಯದ ಘನತೆಯನ್ನು ಪುನಃ ಸ್ಥಾಪಿಸಲು ಇರುವ ಮಾರ್ಗ ಇದೊಂದೇ ಆಗಿದೆ. ನಾವು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಓದಲು ಮತ್ತು ಮನವರಿಕೆ ಮಾಡಲು ಅಲ್ಲಾಹನು ನಮಗೆ ಭಾಗ್ಯ ನೀಡಲಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೂಲಕ ತನ್ನ ಬಳಿಗೆ ತಲಪುವ ಸರಿಯಾದ ಜ್ಞಾನವನ್ನು ಅಲ್ಲಾಹನು ನಮಗೆ ದಯಪಾಲಿಸಲಿ – ಆಮೀನ್.

——————————*****——————————


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 18-12-2015.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim | ***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon